ಜಾವಕ ನಂ. 5818: 2023. ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಉತ್ತರ ಕನ್ನಡ
ಕಾರವಾರ, ದಿನಾಂಕಃ 04-08-2023.

# ಸುತ್ತೋಲೆ ನಂ. 01 / 2023

ಉತ್ತರ ಕನ್ನಡ ಜಿಲ್ಲೆಯ ನ್ಯಾಯಾಲಯಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಬೇಲೀಫ್‌ರವರ ವಾರೆಂಟ್‌ಗಳ ಬಜಾವಣೆಯ ಬಗ್ಗೆ ಮಾಸಿಕ ವರದಿಯನ್ನು (Monthly Statement) ಪರಿಶೀಲಿಸಿದಾಗ ಡೊರ್ ಲಾಕ್, ಸಿಗದೇ ಪರತ್, ಪತ್ತೆ ಆಡಳಿಸಿದೆ ಪರತ್, No Valuables, ಡಿಕ್ರಿದಾರ ಸಹಕರಿಸಿಲ್ಲ, ತೀರ್ಪುರುಣಿ ಸಮಯ ಕೋರಿದ್ದಾರೆ ಅಥವಾ ತೀರ್ಪುರುಣಿ ಸಮಯಯಾಚಿಸಿ ಪತ್ರ ನೀಡಿರುತ್ತಾರೆ ಎಂದು ರಿಪೋರ್ಟ್‌ಗಳನ್ನು ಬರೆಯುವುದು ಕಂಡುಬಂದಿರುತ್ತದೆ. ಆ ಮೂಲಕ ಅನೇಕ ಬೇಲೀಫ್‌ರು ಕರ್ತವ್ಯವನ್ನು ಸಮರ್ಪಕವಾಗಿ ನಿರ್ವಹಿಸದೇ ಇರುವುದು ಕಂಡುಬಂದಿದೆ. ಆದ್ದರಿಂದ ನ್ಯಾಯಾಲಯದ ಪ್ರತಿ ಬೇಲೀಫ್‌ರು Attachment Warrrant, Attachment warrant of Movable, Injunction, Sale Warrant, Sale Proclamation ಜಾರಿಮಾಡಲು ಹಾಗೂ ವಾರಂಟ್‌ಗಳನ್ನು (Execute) ಬಜಾವಣೆ ಮಾಡಲು 100% ಪ್ರಯತ್ನ ಮಾಡತಕ್ಕದ್ದು ಎಂದು ಈ ಮೂಲಕ ನಿರ್ದೇಶಿಸಲಾಗಿದೆ.

ನ್ಯಾಯಾಲಯದ ಪ್ರೋಸೆಸ್ ನಾಜಿರರವರು ಮಾಸಿಕ ವರದಿಯನ್ನು (Monthly Statement) ತಯಾರಿಸುವಾಗ ಬೇಲೀಫ್‌ರು ನೀಡಿದ ಅಂಕಿ-ಸಂಖ್ಯೆಗೆ ಅನುಗುಣವಾಗಿ (Monthly Statement) ಮಾಸಿಕ ವರದಿಯನ್ನು (Monthly Statement) ತಯಾರಿಸದೇ ಪ್ರತಿಯೊಬ್ಬರ ರೆಜಿಸ್ಟರಗಳನ್ನು ಪರಿಶೀಲಿಸಿ ಮಾಸಿಕ ವರದಿಯನ್ನು (Monthly Statement) ತಯಾರಿಸತಕ್ಕದ್ದು. ಡೊರ್ ಲಾಕ್, ಸಿಗದೇ ಪರತ್, ಪತ್ತೆ ಆಡಳಿಸಿದೆ ಪರತ್, No Valuables, ಡಿಕ್ರಿದಾರ ಸಹಕರಿಸಿಲ್ಲ, ತೀರ್ಪುರುಣಿ ಸಮಯ ಕೋರಿದ್ದಾರೆ ಅಥವಾ ತೀರ್ಪುರುಣಿ ಸಮಯಯಾಚಿಸಿ ಪತ್ರ ನೀಡಿರುತ್ತಾರೆ ಎನ್ನುವ ರಿಪೋರ್ಟ್‌ಗಳಿಗೆ ಯಾವುದೇ ಅಂಕವನ್ನು ನೀಡುವಂತಿಲ್ಲ. ಕೇವಲ ವಾಸ್ತವವಾಗಿ Warrant, Injunction, Sale Notice, Sale Proclamation ಜಾರಿ ಮಾಡಿದಲ್ಲಿ ಮಾತ್ರ ಇದನ್ನು ಪರಿಗಣಿಸಿ ಅವರ ಕೆಲಸಕ್ಕೆ ಪ್ರತಿಶತ ಅಂಕ (Percentage) ನೀಡುವಂತೆ ನಿರ್ದೇಶಿಸಲಾಗಿದೆ.

ಅಲ್ಲದೇ NSTEPನಲ್ಲಿ ಮಾತ್ರವೇ Alocation ಮಾಡಿಕೊಡುವುದು ಮತ್ತು ಬೇಲೀಫ್‌ರವರು NSTEPನ್ನು ಕಡ್ಡಾಯವಾಗಿ ಬಳಸತಕ್ಕದ್ದು ಮತ್ತು ಮೇಲ್ಕಂಡ ಪ್ರೋಸಸ್

. . .. .. . . .2

ವಾರಂಟ್‌ಗಳ ಜಾರಿಃಬಜಾವಣೆ (Serve/Execute) ಗಳನ್ನು NSTEPನಲ್ಲಿ ಕಡ್ಡಾಯವಾಗಿ Upload ಮಾಡತಕ್ಕದ್ದು. ಬೇಲೀಫ್‌ರಿಗೆ ಸಾಮಾನ್ಯ ಜಾರಿಕರ್ತರಿಗೆ ನೀಡಬೇಕಾದ ನೋಟೀಸು,ಸಮನ್ಸ್ ಜಾರಿ ಕರ್ತವ್ಯವನ್ನು ವಹಿಸಬಾರದು. ಇನ್ನು ಮುಂದೆ ಕಟ್ಟುನಿಟ್ಟಾಗಿ ಮೇಲ್ಕಂಡ ಸೂಚನೆಗಳನ್ನು ಪಾಲಿಸತಕ್ಕದ್ದು ಎಂದು ನಿರ್ದೇಶಿಸಲಾಗಿದೆ. ಪೀಠಸೀನ ಅಧಿಕಾರಿಗಳು ಈ ಅಂಶಗಳನ್ನು ಪರಿಶೀಲಿಸಿದ ನಂತರವೇ ಮಾಸಿಕ ವರದಿಗಳನ್ನು ಸಲ್ಲಿಸಲು ಈ ಮೂಲಕ ನಿರ್ದೇಶಿಸಲಾಗಿದೆ.

Sd/-

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು.**
**ಉತ್ತರ ಕನ್ನಡ ,ಕಾರವಾರ.**